**ಸಾಕ್ಷಿಯನ್ನು ದಿಃ 07.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ  ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಎರಡು ಒಳರೋಗಿ ಕೇಸ್ ಶೀಟನ್ನು ಹಾಗೂ ಒಂದು ಹೊರರೋಗಿ ಕೇಸ್ ಶೀಟ್ ಅನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ  ನಿಪಿ. 13 ಎಂದು,

ಒಟ್ಟು 14 ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 14 ಎಂದು,

ಫಾರಂ ಬಿ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 15 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 3 ನೇ ಎದುರುದಾರರ ಪರ  ವಕೀಲರಿಂದ**

ಅರ್ಜಿದಾರರಿಗೆ ಮೂಳೆಗಳು ವಕ್ರವಾಗಿ ಕೂಡಿಕೊಂಡಿದೆ. 2024 ರ ನೋಟೀಫಿಕೇಶನ್ ನ Rights of the persons disability Act 2016 ರ ಸೆಕ್ಷನ್ 57 ರ ಪ್ರಕಾರ ನಾನು ನ್ಯೂನತೆಯನ್ನು ನಿರ್ದರಿಸಲು ಅರ್ಹ ವ್ಯಕ್ತಿ ಅಲ್ಲ ಎಂದರೆ ಸರಿಯಲ್ಲ. ಗೈಡ್ ಲೈನ್ ಅನ್ನು ನಾನು ಸಂಪೂರ್ಣವಾಗಿ ನೋಡಿದ್ದೇನು. ನಾನು ನ್ಯೂನತೆಯನ್ನು ನಿರ್ಧರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಯಾವುದೇ ದೃಢೀಕರಣ ಪತ್ರ ಪಡೆದಿಲ್ಲ. ಆದ ಕಾರಣ ನಾನು ನೋಟೀಫಿಕೇಶನ್ ಪ್ರಕಾರ ನ್ಯೂನತೆ ನಿರ್ಧರಿಸಲು ಅರ್ಹ ವ್ಯಕ್ತಿ ಅಲ್ಲದ ಕಾರಣ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.